ಅಸಲು ದಾವಾ ನಂ. 116/2017
ಪಿಡಬ್ಲು 1

ದಿನಾಂಕಃ 17-11-2018 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ- ಪ್ರತಿವಾದಿ ನಂ. 1, 2 ಮತ್ತು 8 ರ ಪರ ಶ್ರೀ ಎಸ್ ಹೆಚ್ ಬಿ ವಕೀಲರಿಂದ.

ನನಗೆ ಇಂಗ್ಲಿಷ ಭಾಷೆ ಮಾತನಾಡಲು ಬರುವುದಿಲ್ಲ. ನನ್ನ ತಂದೆ ಮಹಬೂಬಖಾನನ ತಂದೆಯ ಹೆಸರು ಉಮರಖಾನ ಎಂದರೆ ಸರಿ. ಈತನಿಗೆ ಸರ್ದಾರಖಾನ ಎಂಬ ಹೆಸರಿನ ಇನ್ನೊಬ್ಬ ಮಗನಿದ್ದನು ಎಂದರೆ ಸರಿ. ಈತ ನನಗೆ ದೊಡ್ಡಪ್ಪನಾಗಬೇಕು ಎಂದರೆ ಸರಿ. ನನ್ನ ವಾದ ಪತ್ರದಲ್ಲಿ ದಾವಾ ಶೆಡ್ಯೂಲ ಎ ದಲ್ಲಿನ 1 ರಿಂದ 17 ರ ಆಸ್ತಿಗಳು ನನ್ನ ತಂದೆಯಿಂದ ಬಂದಿರುವ ಆಸ್ತಿಗಳು ಎಂದು ಹೇಳಿ ಬರೆಸಿದ್ದೇನೆ ಎಂದರೆ ಸರಿ. ದಾವಾ ಆಸ್ತಿ ಶೆಡ್ಯೂಲ್ಡ ಎ ದಲ್ಲಿ ಸರ್ವೆ ನಂ. 115/2 ರಲ್ಲಿನ ಕೇವಲ 15 ಗುಂಟೆ 8 ಅಣೆ ಮಾತ್ರ ನನ್ನ ತಂದೆಗೆ ಸೇರಿರುವ ಆಸ್ತಿ ಎಂದರೆ ಸರಿ. ಉಳಿದ ಅರ್ಧ ಜಮೀನು ಪ್ರತಿವಾದಿ ನಂ. 9 ಮತ್ತು 10 ರವರಿಗೆ ಸಂಬಂದಪಟ್ಟಿರುವುದು ಎಂದರೆ ಸರಿ. ದಾವಾ ಆಸ್ತಿ ಶೆಡ್ಯೂಲ ಎ ದ ಕ್ರಮಸಂಖೆ 4 ರಲ್ಲಿ ಅರ್ಧ ಹಿಸ್ಸೆ ನನ್ನ ತಂದೆಗೆ ಸೇರಿದ್ದು ಉಳಿದ ಅರ್ಧ ಹಿಸ್ಸೆ ಪ್ರತಿವಾದಿ ನಂ. 9 ಮತ್ತು 10 ರವರಿಗೆ ಸೇರಿರುವುದು ಎಂದರೆ ಸರಿ. ದಾವಾ ಆಸ್ತಿ ಶೆಡ್ಯೂಲ ಅ ದ ಕ್ರಮಸಂಖ್ಯೆ 7 ರಲ್ಲಿ ನನ್ನ ತಂದೆಯ ಪಾಲಿಗೆ 4 ಎಕರೆ 12 ಗುಂಟೆ ಮಾತ್ರ ಸಂಬಂದಪಟ್ಟಿರುವುದು ಎಂದರೆ ಸರಿ. ಈ ಜಮೀನಿನಲ್ಲಿ ಉಳಿದ ಅರ್ಧ ಹಿಸ್ಸೆಯು ನನ್ನ ದೊಡ್ಡಪ್ಪನಾದ ಸರ್ದಾರಖಾನನಿಗೆ ಸಂಬಂದಪಟ್ಟಿತ್ತು ಎಂದರೆ ಸರಿ. ನಂತರ ಅದು ನವಾಜಖಾನನಿಗೆ ಸಂಬಂದಪಟ್ಟಿರುವುದು ಎಂದರೆ ಸರಿ. ನವಾಜಖಾನನನ್ನು ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಅದೇ ರೀತಿ ರಿ.ಸ ನಂ. 59/6 ಜಮೀನನಲ್ಲಿನ 4 ಎಕರೆ 12 ಗುಂಟೆಯ ಜಮೀನು ಯಾವ ಭಾಗದ್ದು ನವಾಜಖಾನನಿಗೆ ಮತ್ತು ಉಳಿದ ವಿಸ್ತೀರ್ಣದ ಜಮೀನು ನಮಗೆ ಸಂಬಂದಪಟ್ಟಿರುವ ಬಗ್ಗೆ ಪ್ರತ್ೇಕವಾಗಿ ವಾದ ಪತ್ರದಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಈ ವಾದ ಪತ್ರದಲ್ಲಿ ರಿ,ಸ ನಂ. 59/6 ರ ಒಟ್ಟು ವಿಸ್ತೀರ್ಣ 8 ಎಕರೆ 24 ಗುಂಟೆ ಜಮೀನಿನಲ್ಲಿಯೂ ಸಹ ಹಿಸ್ಸೆ ಕೇಳಿ ಈ ದಾವೆ ದಾಖಲು ಮಾಡಿರುತ್ತೇನೆ ಎಂದರೆ ಸರಿ. ಅದೇ ರೀತಿ ಈ ಒಟ್ಟು ವಿಸ್ತೀರ್ಣದ ಜಮೀನು ನನ್ನ ತಂದೆಯ ಜಮೀನು ಇರುವುದಾಗಿ ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಈ ರೀತಿಯಾಗಿ ಬರೆಸಿದ್ದರು ಸಹ ನಾನು ಬರೆಸಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ಹಾಗೂ ನವಾಜಖಾನನ್ನು ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನವಾಜಖಾನ ಈಗ ಮೃತಪಟ್ಟಿರುವನು ಎಂದರೆ ಸರಿ. ಈತನ ಕಾನೂನುಬದ್ಧವಾದ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿ ಕ್ರಮಸಂಖೆ 8 ಇದು ಸಹ ನನ್ನ ತಂದೆ ಸಂಪೂರ್ಣ ಮಾಲಿಕತ್ವದ ಆಸ್ತಿ ಆಗಿರುವುದಿಲ್ಲ ಎಂದರೆ ಸರಿ. ಆದರೆ ಆ ಜಮೀನಿನಲ್ಲಿ 1 ಎಕರೆ 11 ಗುಂಟೆ ಜಮೀನು ನನ್ನ ತಂದೆಗೆ ಸಂಬಂದಪಟ್ಟಿರುವುದು. ನನ್ನ ತಂದೆಗೆ ಸಂಬಂದಪಟ್ಟಿರತಕ್ಕಂತಹ 1 ಎಕರೆ 11 ಗುಂಟೆ ಜಮೀನಿನ ಪ್ರತ್ಯೇಕ ಚಕಬಂದಿಗಳನ್ನು ಪ್ರತ್ಯೇಕವಾಗಿ ಕಾಣಿಸಿರುವುದಿಲ್ಲ ಹಾಗೂ ಆ ಜಮೀನು ನನ್ನ ತಂದೆಗೆ ಸಂಬಂದಪಟ್ಟಿರುವುದಾಗಿ ಹೇಳಿರುವುದಿಲ್ಲ ಎಂದರೆ ಸರಿ. ಉಳಿದ 1 ಎಕರೆ 11 ಗುಂಟೆ ಜಮೀನು ಪ್ರತಿವಾದಿ ನಂ. 9 ಮತ್ತು 10 ರವರಿಗೆ ಸಂಬಂದಪಟ್ಟಿರುವುದು ಎಂದರೆ ಸರಿ. ಈ ಜಮೀನಿನಲ್ಲಿ ಯಾವ ಭಾಗದ 1

ಎಕರೆ 11 ಗುಂಟೆ ಜಮೀನು ನನ್ನ ತಂದೆಗೆ ಸಂಬಂದಪಟ್ಟಿರುವುದ ಹಾಗೂ ಉಳಿದ ಜಮೀನು ಪ್ರತಿವಾದಿ 9 ಮತ್ತು 10 ರವರಿಗೆ ಸಂಬಂದಪಟ್ಟಿರುವುದು ಎಂಬುದರ ಬಗ್ಗೆ ಪ್ರತ್ಯೇಕವಾಗಿ ಚಕಬಂದಿಗಳನ್ನು ವಾದ ಪತ್ರದಲ್ಲಿ ಕಾಣಿಸಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯ ಕ್ರಮ ಸಂಖ್ಯೆ 9 ಸಂಪೂರ್ಣವಾಗಿ ನನ್ನ ತಂದೆಗೆ ಸಂಬಂದಪಟ್ಟಿರುವಂತಹ ಸಂಪೂರ್ಣ ಮಾಲ್ಕಿ ಆಸ್ತಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಅದು ನನ್ನ ತಂದೆಯ ಸಂಪೂರ್ಣ ಮಾಲಿಕತ್ವದ ಆಸ್ತಿಯಾಗಿರುವುದು ಎಂದು ಸಾಕ್ಷಿಯು ಉತ್ತರಿಸಿರುವರು. ನಿ.ಪಿ 6 ರ ದಾಖಲೆಯಲ್ಲಿ ನನ್ನ ಮತ್ತು ಪ್ರತಿವಾದಿ ನಂ. 1, 3 ರಿಂದ 6 ರವರ ಹೆಸರುಗಳು ಹಾಗೂ ಪ್ರತಿವಾದಿ ನಂ. 9 ಮತ್ತು 10 ರವರ ಹೆಸರುಗಳು ದಾಖಲು ಇರುವವು ಎಂದರೆ ಸರಿಯಲ್ಲ. ಸಾಕ್ಷಿಯು ನುಡಿಯುದೆನೆಂದರೆ, ಈ ಜಮೀನಿನಲ್ಲಿ ನನ್ನ ತಂದೆಯ ಹೆಸರಿನಲ್ಲಿ 36 ಗುಂಟೆ ಜಮೀನು ಮತ್ತು ಉಳಿದವರ ಹೆಸರಿನಲ್ಲಿ 36 ಗುಂಟೆ ಜಮೀನು ಇರುವುದು ಎಂದು ಉತ್ತರಿಸಿರುವರು. ರಿ.ಸ ನಂ. 113/2 ರ ಜಮೀನು ನನ್ನ ತಂದೆಯ ಹೆಸರಿನಲ್ಲಿ ಒಟ್ಟು 36 ಗುಂಟೆಯ ವಿಸ್ತೀರ್ಣದ ಆಸ್ತಿ ಇರದಿದ್ದರು ಸಹಿತ ಅದು ಇರುವುದಾಗಿ ಎಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಎಂದರೆ ಸರಿಯಲ್ಲ ನಿ.ಪಿ 6 ರ ದಾಖಲಾತಿಯನ್ನು ನಾನೇ ನನ್ನ ವಕೀಲರ ಮೂಲಕ ಈ ದಾವೆಯಲ್ಲಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ 6 ರ ದಾಖಲೆಯಲ್ಲಿನ ಸಂಗತಿಗಳಿಗೆ ಸಂಪೂರ್ಣವಾಗಿ ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಕ್ರಮಸಂಖ್ಯೆ 10 ಇದು ನನ್ನ ತಂದೆಯ ಸಂಪೂರ್ಣ ಮಾಲಿಕತ್ವದ ಆಸ್ತಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಅದು ನನ್ನ ತಂದೆ ಖರೀದಿ ಹಿಡಿದಿರುತ್ತಾರೆ ಎಂದು ನುಡಿಯುತ್ತಾರೆ. ಈ ಆಸ್ತಿಗೆ ಸಂಬಂದಪಟ್ಟಂತೆ ನಾನು ಯಾವುದೇ ನೊಂದಾಯಿತ ದಾಖಲೆಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ. ಈ ಆಸ್ತಿಯನ್ನು ನನ್ನ ತಂದೆ ಯಾರಿಂದ ಎಷ್ಟು ಹಣಕ್ಕೆ ಮತ್ತು ಯಾವ ವರ್ಷದಲ್ಲಿ ಖರೀದಿ ಹಿಡಿದಿರುವರು ಎಂದು ನನಗೆ ಹೇಳಲು ಆಗುವುದಿಲ್ಲ. ಈ ದಾವೆಯನ್ನು ದಾಖಲು ಮಾಡುವ ಸಮಯದಲ್ಲಿ ನಮ್ಮ ವಕೀಲರಿಗೆ ಈ ಆಸ್ತಿಯನ್ನು ನನ್ನ ತಂದೆ ಖರೀದಿ ಹಿಡಿದಿರುವ ಬಗ್ಗೆ ಮಾಹಿತಿ ನೀಡಿರುವೆನು ಆದರೆ ಅವರಿಗೆ ತಪ್ಪು ಕಲ್ಪನೆಯಾಗಿರುವುದು. ಈ ಆಸ್ತಿಯಲ್ಲಿ ನನ್ನ ತಂದೆಯ ಪಾಲಿಗೆ 3 ಗುಂಟೆ 8 ಅಣೆ ಮಾತ್ರ ನನ್ನ ತಂದೆಗೆ ಸೇರಿರುವುದು ಎಂದರೆ ಸರಿಯಲ್ಲ. ಉಳಿದ ಜಮೀನು ಪ್ರತಿವಾದಿ ನಂ. 9 ಮತ್ತು 10 ರವರಿಗೆ ಸಂಬಂದಪಟ್ಟಿರುವುದು ಎಂದರೆ ಸರಿಯಲ್ಲ. ಈ ಆಸ್ತಿಗೆ ಸಂಬಂದಪಟ್ಟಂತೆ ನಿ.ಪಿ 8 ರ ದಾಖಲೆಯಲ್ಲಿ ನನ್ನ ತಂದೆಯ ವಾರಸುದಾರರು ಮತ್ತು ಪ್ರತಿವಾದಿ ನಂ. 9 ಮತ್ತು 10 ರವರ ಹೆಸರುಗಳು ದಾಖಲಾಗಿರುವವು ಎಂದರೆ ಸರಿ. ದಾವಾ ಆಸ್ತಿಯ ಕ್ರಮ ಸಂಖೆ 11 ಇದು ಸಹ ನನ್ನ ತಂದೆಯ ಸಂಪೂರ್ಣ ಮಾಲಿಕತ್ವದ ಆಸ್ತಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಆದರೆ ಈ ಆಸ್ತಿಯು ನನ್ನ ತಂದೆ ಖರೀದಿ ಮಾಡಿರುವರು. ಈ ಆಸ್ತಿಯನ್ನು ಯಾರಿಂದಎಷ್ಟು ಹಣಕ್ಕೆ ಯಾವ ವರ್ಷದಲ್ಲಿ ಖರೀದಿ ಮಾಡಿರುವರು ಎಂದು ನನಗೆ ಹೇಳಲು ಆಗುವುದಿಲ್ಲ ಹಾಗೂ ಅದಕ್ಕೆ ಸಂಬಂದಪಟ್ಟಂತೆ ಖರೀದಿ ಪತ್ರವನ್ನು ನಾನು ಹಾಜರುಪಡಿಸಿರುವುದಿಲ್ಲ. ಈ ಆಸ್ತಿಯಲ್ಲಿ ನಿಪಿ 9 ರ ಪ್ರಕಾರ ನನ್ನ ತಂದೆಯ ವಾರಸುದಾರರು ಹಾಗೂ ಪ್ರತಿವಾ ನಂ. 9 ಮತ್ತು 10 ರವರ ಹೆಸರುಗಳು ದಾಖಲಾಗಿರುವವು ಎಂದರೆ ಸರಿ. ಈ ಆಸ್ತಿಗೆ ಸಂಬಂದಪಟ್ಟಂತೆ ನನ್ನ ತಂದೆಯ ಪಾಲಿನ 2 ಗುಂಟೆ ಜಮೀನಿನ ಚಕಬಂದಿ ಹಾಗೂ ಪ್ರತಿವಾದಿ ನಂ. 9 ಮತ್ತು 10 ರವರ ಪಾಲಿನ 2 ಗುಂಟೆ ಚಕಬಂದಿಯನ್ನು ಪ್ರತ್ಯೇಕವಾಗಿ ವಾದ ಪತ್ರದಲ್ಲಿ ಕಾಣಿಸಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿ ಕ್ರಮ ಸಂಖೆ 15 ಮತ್ತು 18 ಒಂದೇ ಆಸ್ತಿಯಾಗಿರುವವು ಎಂದರೆ ಸರಿ. ಆದರೆ ಅವುಗಳನ್ನು ಪ್ರತ್ಯೇಕವಾದ ಆಸ್ತಿಗಳೆಂದು ತೋರಿಸಿ ಅವುಗಳ ಚಕಬಂದಿಗಳನ್ನು ಸಹ ಬೇರೆ ಬೇರೆಯಾಗಿ ಕಾಣಿಸಿದ್ದೇನ ಎಂದರೆ ಸರಿ. ಈ ಆಸ್ತಿಯು ನನ್ನ ತಂದೆಯ ಕಡೆಯಿಂದ ಬಂದಿರುವದಾಗಿ ಎಂದು ಹೇಳಿ ವಾದಪತ್ರದಲ್ಲಿ ಬರೆಸಿದ್ದು ಆದರೆ ಅದು ನನ್ನ ತಂದೆಯ ಆಸ್ತಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ 13 ರ ದಾಖಲೆಯ ಪ್ರಕಾರ 1 ನೇ ಪ್ರತಿವಾದಿಯು ಖರೀದಿ ಮಾಡಿರುವದಾಗಿ ಎಂದು ಆ ದಾಖಲೆಯಲ್ಲಿ ನಮೂದು ಮಾಡಿರುವರು ಎಂದರೆ ಸರಿ.

ನನ್ನ ದೊಡ್ಡಪ್ಪ ಸರದಾರಖಾನನಿಗೆ 5 ಜನ ಗಂಡು ಮಕ್ಕಳು, ಒಬ್ಬಳು ಹೆಣ್ಣು ಮಗಳು ಎಂದರೆ ಸರಿ. ಹಿರಿಯ ಮಗನ ಹೆಸರು ಕರೀಮಖಾನ ಎಂದರೆ ಸರಿ. ನನ್ನ ಹಿರಿಯ ಸಹೋದರನ ಹೆಸರು ಕರೀಮಖಾನ ಅಂದೆರ ಸರಿ. ಆತ ಈ ದಾವೆಯಲ್ಲಿನ 3 ನೇ ಪ್ರತಿವಾದಿ ಆಗಿರುವನು ಎಂದರೆ ಸರಿ. ನನ್ನ ದೊಡ್ಡಪ್ಪನ ಮಗನಾದ ಕರೀಮಖಾನ ಜೀವಂತನಾಗಿರುವನು ಎಂದೆರ ಸರಿ. ಇತನಿಗೆ ಉಮರಖಾನ, ನಾಹೀದಾ ಬೇಗಂ, ಹಸನಖಾನ ಮತ್ತು ಬೀಬೀ ಸೋಗರಾ ಎಂಬುವವರು ಮಕ್ಕಳು ಇರುವರು ಎಂದರೆ ಸರಿ. ಬೀಬಿಸೋಗರಾ ಇವಳು ಈ ದಾವೆಯಲ್ಲಿನ 1 ನೇ ಪ್ರತಿವಾದಿಯ ಹೆಂಡತಿ ಇರುವಳು ಎಂದರೆ ಸರಿ. ಬೀಬೀಸೋಗರಾ ಇವಳು ಈ ದಾವೇಯಲ್ಲಿನ 2 ನೇ ಪ್ರತಿವಾದಿ ಆಗಿರುವಳು ಎಂದರೆ ಸರಿ. ಈ ದಾವೆಯಲ್ಲಿನ ಪ್ರತಿವಾದಿ 3 ಮತ್ತು 4 ರವರು 1 ನೇ ಪ್ರತಿವಾದಿಕ್ಕಿಂತಲೂ ಹಿರಿಯ ಸಹೋದರರು ಆಗಿರುವರು ಎಂದರೆ ಸರಿ. ನನ್ನ ಮತ್ತು ಪ್ರತಿವಾದಿ 3 ಮತ್ತು 4 ರವರ ಮದ್ಯೆ ಸಂಬಂಧ ಚೆನ್ನಾಗಿರುವುದು ಎಂದರೆ ಸರಿ. 1 ನೇ ಪ್ರತಿವಾದಿಯು 17 ಮತ್ತು 18 ವರ್ಷದವನಾಗಿದ್ದಾಗಿನಿಂದಲೂ ನನ್ನ, ನನ್ನ ತಂದೆ, ಪ್ರತಿವಾದಿ 3 ಮತ್ತು 4 ರವರ ಮದ್ಯೆ ಸಂಬಂಧ ಚೆನ್ನಾಗಿರಲಿಲ್ಲ ಎಂದರೆ ಸರಿಯಲ್ಲ. ಇವತ್ತಿನವರೆಗೂ ನಮ್ಮ ಮದ್ಯೆ ಸಂಬಂಧ ಚೆನ್ನಾಗಿರುವುದಿಲ್ಲ ಎಂದರೆ ಸರಿಯಲ್ಲ. ಆದರೆ ಅವರು ನನಗೆ ದಾವಾ ಆಸ್ತಿಯಲ್ಲಿ ಹಿಸ್ಸೆ ನಿಡುವುದಿಲ್ಲವೆಂದು ಹೇಳಿದ ಕಾರಣ ಈ ದಾವೆ ಸಲ್ಲಿಸಿದ್ದೇನೆ. ಪ್ರತಿವಾದಿ 3 ಮತ್ತು 4 ರವರು ಈ ದಾವೆಯಲ್ಲಿ ಲಿಖಿತ ಪತ್ರ ಸಲ್ಲಿಸಿರುವುದಿಲ್ಲ ಎಂದರೆ ಸರಿ. ನನ್ನ ಉಳಿದ ಸಹೋದರರು ಕೂಡಿಕೊಂಡು ನನ್ನನ್ನು ಮುಂದೆ ಮಾಡಿ ಪ್ರತಿವಾದಿ 1,2 ಮತ್ತು 8 ರವರ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನನ್ನ ಕಡೆಯಿಂದ ಸುಳ್ಳು ದಾವೆ ಮಾಡಿಸಿರುವರು ಎಂದರೆ ಸರಿಯಲ್ಲ.

ಈಗಿನ ನದಿನೀರಲಗಿ ಗ್ರಾಮ ಆಗುವ ಪೂರ್ವದಲ್ಲಿ ಹಳೆಯ ನದಿನೀರಲಗಿ ಗ್ರಾಮ ಇತ್ತು ಎಂದರೆ ಸರಿ. ಆ ಹಳೆ ಗ್ರಾಮದ ಪೂರ್ವ ಮತ್ತು ಉತ್ತರ ದಿಕ್ಕಿನಲ್ಲಿ ವರದಾ ನದಿಯು ಹರಿದು ಹೋಗಿದೆ ಎಂದರೆ ಸರಿ. ಆ ಗ್ರಾಮದ ಉತ್ತರ ದಿಕ್ಕಿಗೆ ಹಾವೇರಿ ತಾಲೂಕಿನ ಗೋಣನತಮ್ಮಗಿ ಗ್ರಾಮ ಇರುವುದು ಎಂದರೆ ಸರಿ. ಆ ಗ್ರಾಮದ ಪೂರ್ವದ ದಿಕ್ಕಿಗೆ ರಾಮಾಪೂರ, ಅಗಸನತೊಟ್ಟಿ ಮತ್ತು ಶಿರಮಾಪೂರ ಗ್ರಾಮಗಳು ಇರುವವು ಎಂದರೆ ಸರಿ. ಹಳೇಯ ನದಿನೀರಲಗಿ ಗ್ರಾಮದಲ್ಲಿ ನಮ್ಮ ತಂದೆ ಮೆಹಬೂಬಖಾನ ಹೆಸರಿನಲ್ಲಿ ವರದಾ ನದಿಯಿಂದ ಕೇವಲ 300 ಪೂಟು ಅಂತರದಲ್ಲಿ ಮನೆ ಇತ್ತು ಎಂದೆರ ಸರಿ. ನನ್ನ ತಂದೆ ಆ ನದಿಯಲ್ಲಿ ಜನರನ್ನು ಸಾಗಿಸುವ ದೋಣಿಯನ್ನು ಹೊಂದಿದ್ದನು ಎಂದರೆ ಸರಿ. ಈ ದೋಣಿಯು ಕೆಳಭಾಗವು ಪ್ರತಿವಾದಿಯ 4 ವಿನ ಮನೆಯಲ್ಲಿರುವುದು ಎಂದರೆ ಸರಿಯಲ್ಲ. ಸಾಕ್ಷಿಯು ಪುನಃ ನುಡಿಯವುದೇನೆಂದೆರೆ ಆ ದೋಣಿಯ ಕೆಳಭಾಗ 4 ನೇ ಪ್ರತಿವಾದಿಯ ಮನೆಯಲ್ಲರುವುದು ನನಗೆ ಗೊತ್ತಿಲ್ಲಾ. ಆದರೆ ಗಿಡದ ತುಂಡಿನ ಬಡ್ಡಿ ಇರುವುದು ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯು 16-17 ವಯಸ್ಸಿನಲ್ಲಿ ನನ್ನ ದೊಡ್ಡಪ್ಪನ ಮಗನಾದ ಕರೀಮಖಾನ ಇವರ ಮನೆಯಲ್ಲಿ ಹೋಗಿ ವಾಸವಾಗಿದ್ದ ಎಂದೆರ ಸರಿಯಲ್ಲ. ನನ್ನ ತಂದೆ ನದಿಯನ್ನು ದಾಟುವ ಸಲುವಾಗಿ ದೋಣಿಯನ್ನು ನಡೆಸುವಾಗ ನಾನು, ಪ್ರತಿವಾದಿ ನಂ.1,3 ಮತ್ತು 4 ರವರು ನಡೆಸುತ್ತಿದ್ದೇವು ಎಂದೆರ ಸರಿ. ನನ್ನ ದೊಡ್ಡಪ್ಪನ ಮಗನಾದ ಕರೀಮಖಾನನು 1 ನೇ ಪ್ರತಿವಾದಿಗೆ ಒಂದು ದೋಣಿಯನ್ನು ಕೊಡಿಸಿದ್ದು, ಆ ದೋಣಿಯನ್ನು ಆತ ಮೆಳ್ಳಿಹಳ್ಳಿ ಗ್ರಾಮದಲ್ಲಿ ಉಪಯೋಗಿಸುತ್ತಿದ್ದ ಎಂದರೆ ಸರಿಯಲ್ಲ. 1 ನೆ ಪ್ರತಿವಾದಿಯು 2 ನೇ ಪ್ರತಿವಾದಿಯನ್ನು ವಿವಾಹ ಆಗುವವರೆಗೂ ದೊಡ್ಡಪ್ಪನಾದ ಸರದಾರಖಾನ ಮತ್ತು ಆತನ ಮಗ

ಕರೀಮಖಾನನ ಮನೆಯಲ್ಲಿ ವಾಸವಾಗಿದ್ದನು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ವಾಸವಾಗಿರುವ ಮನೆಯು ಅದು ನನ್ನ ದೊಡ್ಡಪ್ಪನ ಮಗನಾದ ಸರದಾರಖಾನ ಮತ್ತು ಅತನ ಮಗನಾದ ಕರೀಮಖಾನ ಇವರಿಗೆ ಸಂಬಂಧಪಟ್ಟಿದ್ದು ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿ 1 ಮತ್ತು 2 ರವರು ಮದುವೆಯಾದಾಗಿನಿಂದಲೂ ಇವತ್ತಿನವರೆಗೂ ಈಗಿದ್ದ ಮನೆಯಲ್ಲಿ ವಾಸವಾಗಿರುವರು ಎಂದರೆ ಸಾಕ್ಷಿಯು ತಾನು ಸಹ ವಾಸವಾಗಿದ್ದನು ಎಂದು ನುಡಿಯುತ್ತಾರೆ. ಆ ಮನೆಯಿಂದ ನಾನು ಕಳೆದ 2 ವರ್ಷಗಳಿಂದ ಬೇರೆಯಾಗಿ ನಾನು ವಾಸಿಸಲು ಪ್ರಾರಂಭಿಸಿದೇನು. ಈಗ ಆ ಮನೆಯಲ್ಲಿ ಪ್ರತಿವಾದಿ 1 ಮತ್ತು 2 ರವರು ಮಾತ್ರ ವಾಸವಾಗಿರುವರು. ಪ್ರತಿವಾದಿ 3 ನೇದವರು ವಿವಾಹವಾಗುವ ಪೂರ್ವದಿಂದಲೂ ಸೊರಬ ತಾಲೂಕಿನ ತಲಗಡ್ಡಿ ಗ್ರಾಮದಲ್ಲಿ ವಾಸವಾಗಿರುವನು ಎಂದರೆ ಸಾಕ್ಷಿಯು ತನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಪ್ರತಿವಾದಿ 1,2 ಮತ್ತು 8 ರವರು ಸಲ್ಲಿಸಿರುವ ಲಿಖಿತ ಪತ್ರವನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ಈ ಪ್ರತಿವಾದಿಯರು ಸಲ್ಲಿಸಿರುವ ಲಿಖಿತ ಪತ್ರದ ಖಂಡಿಕೆ 3 ಇ ಸಂಗತಿಗಳನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. 3 ನೇ ಪ್ರತಿವಾದಿಯ ವಿವಾಹ ಸಮಾರು 41 ವರ್ಷಗಳ ಹಿಂದೆ 1977 ರಲ್ಲಿ ತಲಗಡ್ಡಿ ಗ್ರಾಮದಲ್ಲಿ ಆಗಿರುವುದು ಎಂದರೆ ಸಾಕ್ಷಿಯು ತನಗೆ ಮಾಹಿತಿ ಇರುವುದಿಲ್ಲ ಮತ್ತು ತಿಳುವಳಿಕೆ ಇರಲಿಲ್ಲ ಎಂದು ನುಡಿಯುತ್ತಾರೆ. ನನಗೆ ತಿಳುವಳಿಕೆಯು ನಾನು 6 ವರ್ಷದವನಿದ್ದಾಗ ಬಂದಿರುವುದು. ನಮ್ಮ ಧರ್ಮದ ಸಂಪ್ರದಾಯ ಪ್ರಕಾರ ವಿವಾಹವು ಹೆಣ್ಣಿನ ಮನೆಯಲ್ಲಿ ಮಾಡಿಕೊಡುತ್ತಾರೆ ಎಂರದೆ ಸರಿ. ನಾನು ಇವತ್ತಿನವರೆಗೂ 3 ನೇ ಪ್ರತಿವಾದಿಯ ವಿವಾಹ ಯಾವ ಊರಿನಲ್ಲಿ ಆಗಿರುವುದು ಎಂದು ತಿಳಿದುಕೊಂಡಿರುವುದಿಲ್ಲ. ಈ ಪ್ರತಿವಾದಿಯರು ತಮ್ಮ ಲಿಖಿತ ಪತ್ರದಲ್ಲಿ 3 ನೇ ಪ್ರತಿವಾದಿಯ ವಿವಾಹದ ಬಗ್ಗೆ ಬರೆಸಿ ಹಾಕಿರುವ ಸಂಗತಿಯನ್ನು ನಮ್ಮ ವಕೀಲರ ಮೂಲಕ ಕೇಳಿ ತಿಳಿದುಕೊಂಡಿರುವುದಿಲ್ಲ. ಆ ಲಿಖಿತ ಪತ್ರದಲ್ಲಿ ಬರೆದಿರುವ ಸಂಗತಿಗಳು ನಾನು ತಿಳಿದುಕೊಂಡಿದ್ದರೂ ಸಹ ಈ ದಾವೆಯು ನನ್ನ ವಿರುದ್ಧ ಆಗುವುದಾಗಿ ಎಂಬ ಕಾರಣದಿಂದ ಅದರಲ್ಲಿನ ಸಂಗತಿಗಳು ನಾನು ತಿಳಿದುಕೊಂಡಿರುವುದಿಲ್ಲವೆಂದು ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದೆರ ಸರಿಯಲ್ಲ. 3 ನೇ ಪ್ರತಿವಾದಿ ವಿವಾಹ ಮಾಡಿಕೊಂಡ ಬಂದ ನಂತರ ನನ್ನ ದೊಡ್ಡಪ್ಪನಾದ ಸರದಾರಖಾನ ಮತ್ತು ಆತನ ಮಗನಾದ ಕರೀಮಖಾನ ಮಾಲಿಕತ್ವದ ಖುಲ್ಲಾ ಜಾಗೆಯಲ್ಲಿ ಕಟುಂಬ ಸಮೇತ ವಾಸವಾಗಿರುವನು ಎಂದರೆ ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಈ ಸಂಗತಿಯನ್ನು ಪ್ರತಿವಾದಿ 1,2 ಮತ್ತು 8 ರವರ ಲಿಖಿತ ಪತ್ರದಲ್ಲಿಹೇಳಿ ಬರೆಸಿದ್ದು ಆ ಸಂಗತಿಯನ್ನು ನಾನು ತಿಳಿದುಕೊಂಡಿರುವುದಿಲ್ಲ.

ನಾನಾಗಲೀ ನನ್ನ ತಂದೆಯಾಗಲೀ ಇಸ್ಲಾಂ ಧರ್ಮವನ್ನು ಬಿಟ್ಟು ಹಿಂದೂ ಧರ್ಮಕ್ಕೆ ಪರಿವರ್ತನೆ ಆಗಿರುವುದಿಲ್ಲ. ನನ್ನ ತಂದೆಯ ಜೀವಿತ ಅವಧಿಯಲ್ಲಿ ಆತನ ಆಸ್ತಿಯಲ್ಲಿ ಆತನ ಮಕ್ಕಳಿಗೆ ಪಾಲು ಬರುತ್ತದೇಯೋ ಅಥವಾ ಇಲ್ಲವೋ ಎಂಬುದರ ಬಗ್ಗೆ ನಾನು ವಕೀಲರಿಂದ ಕೇಳಿ ತಿಳಿದುಕೊಂಡಿರುವುದಿಲ್ಲ. ನಾನು, ಪ್ರತಿವಾದಿ 1,3,4 ಮತ್ತು ನನ್ನ ತಂದೆಯ ಮಧ್ಯೆ ದಿಃ 20-09-1994 ರಂದು ಯಾವುದೇ ಪಾಲು ವಿಭಾಗ ವಾಟಣಿ ಮಾಡಿಕೊಂಡಿರುವುದಿಲ್ಲ. ಈ ಪಾಲು ವಾಟಣಿಯ ಪ್ರಕಾರ ದಾವಾ ಶೆಡ್ಯೂಲ ಎ ಆಸ್ತಿ ಕ್ರ ಸಂ. 8,13 ಹಾಗೂ ರಿ.ಸ.ನಂ.49/5 ರ ಆಸ್ತಿಗಳು ನನ್ನ ಪಾಲಿಗೆ ಬಂದಿರುವುದಿಲ್ಲ. ಅದೇ ರೀತಿ ಪ್ರತಿವಾದಿ 3 ಮತ್ತು 4 ರವರಿಗೆ

ದಾವಾ ಆಸ್ತಿ ಶೆಡ್ಯೂಲ್ ಎ ದಲ್ಲಿನ ಕ್ರ.ಸ. 7, 9 ಮತ್ತು 16 ರಲ್ಲಿ ತಲಾ ಅರ್ಧ ಅರ್ಧ ಹಿಸ್ಸೆ ಮಾಡಿಕೊಂಡಿರುವ ಬಗ್ಗೆ ಮಾಹಿತಿ ಇರುವುದಿಲ್ಲ. ಅದೇ ರೀತಿ ನನಗೂ ಮತ್ತು ಪ್ರತಿವಾದಿ 4 ವಿಗೆ ದಾವಾ ಆಸ್ತಿ ಶೆಡ್ಯೂಲ ಎ ದಲ್ಲಿನ ಕ್ರ.ಸ. 14 ಆಸ್ತಿಯು ಜಂಟಿಯಾಗಿ ಬಂದಿರುವುದಿಲ್ಲ. ನನ್ನ ತಂದೆ ತನ್ನ ಜೀವಿತ ಅವಧಿಯಲ್ಲಿ ಈ ಮೇಲೆ ಹೇಳಿದಂತೆ ಆಸ್ತಿಯಲ್ಲಿ ನನ್ನ ಮತ್ತು ನನ್ನ ಸಹೋದರ ಮದ್ಯೆ ಪಾಲು ವಿಭಾಗ ಮಾಡಿಕೊಟ್ಟಿರುವುದಿಲ್ಲ. ನಾನು, ನನ್ನ ತಂದೆ ಹಾಗೂ ಪ್ರತಿವಾದಿ 3 ಮತ್ತು 4 ರವರು ಕೂಡಿಕೊಂಡು 1 ನೇ ಪ್ರತಿವಾದಿಯ ಸ್ವಂತ ಮಾಲೀಕಿಯ ದಾವಾ ಆಸ್ತಿ ಶೆಡ್ಯೂಲ ಎ ಕ್ರ.ಸ.15 ಹಾಗೂ 18 ಒಂದೇ ಆಸ್ತಿಯನ್ನು ಎತ್ತಿಹಾಕುವ ಸಲುವಾಗಿ ದಿಃ 20-09-1994 ರಂದು ಒಂದು ಖೊಟ್ಟಿ ವಾಟಣಿ ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದೆರ ಸರಿಯಲ್ಲ. ಆ ವಾಟಣಿ ಪತ್ರದ ಪ್ರಕಾರ ನಾನು, ನನ್ನ ತಂದೆ ಮತ್ತು ಪ್ರತಿವಾದಿ 3 ಮತ್ತು 4 ರವರು ಕೂಡಿಕೊಂಡು ತಹಶೀಲ್ದಾರ ಸವಣೂರಿಗೆ ವರದಿಯನ್ನು ನೀಡಿ ಆ ವರದಿಯಎ ಮೇರೆಗೆ ಡ ನಂ. 1252 ರ ಹಕ್ಕು ಬದಲಾವಣೆ ಆದೇಶವನ್ನು ದಿಃ 28-10-1994 ರಂದು ಆದೇಶ ಮಾಡಿಕೊಂಡಿದ್ದೇವೆ ಎಂದೆರ ಸರಿಯಲ್ಲ. ಆ ವಾಟಣಿ ಪತ್ರದಲ್ಲಿ 1 ನೇ ಪ್ರತಿವಾದಿಗೆ ನೀಡಿರುವ ಆಸ್ತಿಯು ಆತನು ಖರೀದಿ ಮಾಡಿರುವ ಆಸ್ತಿಯನ್ನು ಆತನಿಗೆ ನೀಡಿರುವೇವು ಎಂದರೆ ಸರಿಯಲ್ಲ. ಆ ವಾಟಣಿ ಪತ್ರದಲ್ಲಿ 1 ನೇ ಪ್ರತಿವಾದಿಗೆ ನೀಡಿರುವ ಆಸ್ತಿಯು ಅದು ನನ್ನ ತಂದೆಯ ಆಸ್ತಿಯಾಗಿರುವುದಾಗಿ ಎಂದು ಅದರಲ್ಲಿ ನಮೂದು ಮಾಡಿದ್ದೇವೆ ಎಂದರೆ ಸರಿಯಲ್ಲ. ಈ ಆಸ್ತಿಯು 1994 ರ ಮುಂಚೆನಿಂದಲೂ ಹಾಗೂ ಇವತ್ತಿನವರೆಗೂ ಆ ಆಸ್ತಿಯ ದಾಖಲೆಯಲ್ಲಿ 1 ನೇ ಪ್ರತಿವಾದಿಯು ಮಾಲೀಕನಾಗಿರುವನು ಎಂದು ನಮೂದು ಆಗಿರುವುದು ಎಂದರೆ ಸರಿ. ಈ ಡ ನಂಬರ ಆದೇಶ ವಿರುದ್ಧ 1 ನೇ ಪ್ರತಿವಾದಿಯು ಸವಣು ೂರಿನ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಆರ್ ಟಿ ಎಸ್ ಅಪೀಲ ನಂ. 106/1994-95 ಪ್ರಕರಣವನ್ನು ನನ್ನ, ನನ್ನ ತಂದೆ ಹಾಗೂ ಉಳಿದ ಇಬ್ಬರ ಸಹೋದರರ ವಿರುದ್ಧ ದಾಖಲು ಮಾಡಿದ್ದನು ಎಂದರೆ ಸರಿಯಲ್ಲ. ಆ ಪ್ರಕರಣದಲ್ಲಿ ನಾವು ವಕೀಲರನ್ನು ನೇಮಕ ಮಾಡಿಕೊಂಡಿದ್ದೇವು ಎಂದರೆ ಸರಿಯಲ್ಲ. ಈ ಸವಣೂರ ನ್ಯಾಯಾಲಯದಲ್ಲಿ ಶ್ರೀ ಡಿ ಎಸ್ ಸಣ್ಣಪೂಜಾರ ವಕೀಲರು ವಕೀಲ ವೃತ್ತಿ ಮಾಡುತ್ತಿರುವರ ಎಂದರೆ ಗೊತ್ತಿಲ್ಲಾ ಎಂದು ನುಡಿಯುತ್ತಾರೆ. ಅವರಿಗೆ ವಕಾಲತ್ತ ನಾಮಾ ಪತ್ರದ ಮೇಲೆ ಸಹಿ ಮಾಡಿ ನೀಡಿದ್ದೇನು ಎಂದೆರ ಸರಿಯಲ್ಲ. ಆ ವಕಾಲತ್ತ ನಾಮಾದಲ್ಲಿ ನಾನು, ನನ್ನ ತಂದೆ ಹಾಗೂ ಪ್ರತಿವಾದಿ 3 ಮತ್ತು 4 ರವರು ಸಹಿ ಮಾಡಿಕೊಟ್ಟಿರುವರು ಎಂದರೆ ಸರಿಯಲ್ಲ. ಈ ಮೇಲ್ಮನವಿ ಪ್ರಕರಣದಲ್ಲಿ ಡ ನಂಬರ 1252 ರ ಆದೇಶವನ್ನು ರದ್ದು ಪಡಿಸಿರುವರು ಎಂದರೆ ಸರಿಯಲ್ಲ. ಈ ಆದೇಶದ ವಿರುದ್ಧ ನಾನಾಗಲೀ, ನನ್ನ ತಂದೆಯಾಗಲೀ ಹಾಗೂ ಉಳಿದ ಇಬ್ಬರ ಸಹೋದರರು ಆಗಲೀ ಮೇಲ್ಮನವಿಯನ್ನು ಮಾನ್ಯ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಸಲ್ಲಿಸಿರುವುದಿಲ್ಲ ಹಾಗೂ ಆ ವಾಟಣಿ ಪತ್ರಕ್ಕೆ ಸಂಬಂಧಪಟ್ಟಂತೆ ಯಾವುದೇ ಸಿವಿಲ್ ದಾವೆಯನ್ನು ದಾಖಲು ಮಾಡಿರುವುದಿಲ್ಲ ಎಂದರೆ ಸರಿ.

ದಾವಾ ಶೆಡ್ಯೂಲ ಎ ಆಸ್ತಿಯ ಕ್ರ.ಸ.20 ಮತ್ತು 21 ರ ಆಸ್ತಿಗಳನ್ನು 1 ನೇ ಪ್ರತಿವಾದಿಯು ಕ್ರಮವಾಗಿ 1991 ಮತ್ತು 92 ನೇ ಸಾಲಿನಲ್ಲಿ ಖರೀದಿ ಮಾಡಿರುವನು ಎಂದರೆ ಸರಿಯಲ್ಲ. ಈ ಆಸ್ತಿಗಳನ್ನು ದಿಃ 20-09-1994 ರ ವಾಟಣಿ ಪತ್ರದಲ್ಲಿಸೇರಿಸರಲಿಲ್ಲ ಎಂದರೆ ಸಾಕ್ಷಿಯ ತನಗೆ ಮಾಹಿತಿ ಇರುವುದಿಲ್ಲ ಎಂದು

ನುಡಿಯುತ್ತಾರೆ. ಈ ಆಸ್ತಿಗಳು 1 ನೇ ಪ್ರತಿವಾದಿಯ ಸ್ವಂತ ಆಸ್ತಿಗಳು ಎಂದರೆ ಸರಿಯಲ್ಲ, ನಾನು ಮತ್ತು ಉಳಿದ ಸಹೋದರರ ದುಡಿಮೆಯ ಆದಾಯದಿಂದ ಆ ಆಸ್ತಿಗಳನ್ನು 1 ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿ ಮಾಡಿರುವರು ಆತ ಮನೆತನದ ವ್ಯವಹಾರವನ್ನು ನೋಡಿಕೊಂಡು ಹೋಗುತ್ತಿರುವುದರಿಂದ ಹಾಗೂ ಹಿರಿಯನಾಗಿರುವದರಿಂದ. ದಿಃ 01-06-1985 ರಂದು ನನ್ನ ತಂದೆ ಜೀವಂತನಾಗಿದ್ದನು ಎಂದರೆ ಸರಿ. ನನ್ನ ತಂದೆ ದಿಃ 05-09-1998 ರಲ್ಲಿ ಮೃತಪಟ್ಟಿರುವನು ಎಂದರೆ ಸರಿ. ನನ್ನ ತಾಯಿ ದಿಃ 06-12-1996 ರಲ್ಲಿ ಮೃತಪಟ್ಟಿರುವಳು ಎಂದರೆ ಸರಿ. ನನ್ನ ತಂದೆಗೆ ಕಣ್ಣು ಕಾಣಿಸುತ್ತಿರಲಿಲ್ಲ ಹಾಗೂ ಆತನಿಗೆ ನಡೆದಾಡುವ ಶಕ್ತಿ ಇರಲಿಲ್ಲ ಅದ ಕಾರಣ 1 ನೇ ಪ್ರತಿವಾದಿಯು ಮನೆತನದ ಹಿರಿತನ ಮಾಡುತ್ತಿದ್ದನು. ಆರ್ ಟಿ ಎಸ್ ಮೇಲ್ಮನವಿಯ ಪ್ರಕರಣದಲ್ಲಿ 1 ನೇ ಪ್ರತಿವಾದಿ ಮನೆಯ ಹಿರಿಯ ಮಗನಾಗಿ ಮನೆತನದ ಹಿರಿತನ ಮಾಡುತ್ತಿರುವ ಬಗ್ಗೆ ನಮ್ಮ ತಕರಾರಲ್ಲಿ ಹೇಳಿ ಬರೆಸಿರುವುದಿಲ್ಲ ಎಂದರೆ ಸಾಕ್ಷಿಯು ತನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ದಿಃ 31-01-1996 ರ ಆರ್ ಟಿ ಎಸ್ ಮೇಲ್ಮನವಿಯ ಆದೇಶದ ನಂತರ 12 ವರ್ಷದ ಅವಧಿಯೊಳಗಾಗಿ ನನ್ನ ತಂದೆ ಜೀವಂತ ಇರುವ ಅವಧಿಯಲ್ಲಿ ಅವನಾಗಲೀ, ನಾವಾಗಲೀ ಯಾವುದೇ ಸಿವಿಲ್ ಪ್ರಕರಣ ದಾಖಲು ಮಾಡಿರುವುದಿಲ್ಲ ಎಂದರೆ ಸರಿ.

ಸರ್ವೆ ನಂ. 76/1 ಬ ಜಮೀನು 1 ನೇ ಪ್ರತಿವಾದಿಯು ಸುಮಾರು 36 ವರ್ಷಗಳ ಹಿಂದೆ ಖರೀದಿ ಮಾಡಿರುವನು. ಆ ಸಮಯದಲ್ಲಿ ಆ ಆಸ್ತಿಯ ಮೂಲ ಮಾಲೀಕರು ನೂರಸಾಬ ಮರ್ದನಸಾಬ ನದಾಫ ಇದ್ದರು. ಆ ಜಮೀನನ್ನು ಒಟ್ಟು 32 ಸಾವಿರ ರೂ.ಗಳಿಗೆ ಖರೀದಿ ಹಿಡಿದಿರುವರು. ಈ ಹಣದಲ್ಲಿ ಅರ್ಧ ಭಾಗದ ಹಣವನ್ನು ಖರೀದಿ ಪತ್ರದ ನೊಂದಣಿ ಪೂರ್ವದಲ್ಲಿ ಹಾಗೂ ಉಳಿದ ಹಣವನ್ನು ನೊಂದಣಿ ಕಾಲಕ್ಕೆ ನೀಡಿರುವನು. ಈ ಆಸ್ತಿಗೆ ಸಂಬಂಧಪಟ್ಟಂತೆ ಖರೀದಿ ಕರಾರು ಪತ್ರ ಆಗಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಆ ಖರೀದಿ ಮಾತುಕತೆ ಸಮಯದಲ್ಲಿ ನಾನು ಭಾಗವಹಿಸಿರುವುದಿಲ್ಲ. ಆ ಸಮಯದಲ್ಲಿ ಉಳಿದ ನನ್ನ ಇಬ್ಬರು ಸಹೋದರರು ಹಾಗೂ ನನ್ನ ತಂದೆ ಭಾಗವಹಿಸಿದ್ದರು. ಈ ಸಂಗತಿ ನನಗೆ ಖರೀದಿ ಪತ್ರ ನೊಂದಣಿ ಆದ 1 ತಿಂಗಳ ನಂತರ ಗೊತ್ತಾಗಿರುವುದು. ಆ ಖರೀದಿ ಪತ್ರ ನೊಂದಣಿ ಸಮಯದಲ್ಲಿ 1 ನೇ ಪ್ರತಿವಾದಿಯನ್ನು ಹೊರತು ಪಡಿಸಿ ನಮ್ಮ ಕುಟುಂಬದ ಯಾವುದೇ ಸದಸ್ಯರು ಹೋಗಿರುವುದಿಲ್ಲ. ಈ ದಾವೆ ದಾಖಲು ಮಾಡುವ ಸಮಯದಲ್ಲಿ ದಾವಾ ಅಸ್ತಿ ನಂ .76/1 ಬ ದ ಖರೀದಿ ಪತ್ರದ ದೃಢಿಕೃತ ನಕಲನ್ನು ಪಡೆದುಕೊಂಡಿರುವುದಿಲ್ಲ ಆದರೆ ಪಹಣಿ ಪತ್ರಿಕೆಯನ್ನು ಪಡೆದುಕೊಂಡಿರುವೇನು. ಆ ಖರೀದಿ ಪತ್ರದಲ್ಲಿ ಸಾಕ್ಷಿದಾರ ಅಂತಾ ಯಾರು ಸಹಿ ಮಾಡಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಆ ಖರೀದಿ ಪತ್ರದ ದೃಢಿಕೃತ ನಕಲನ್ನು ಈ ದಾವೆ ದಾಖಲು ಮಾಡುವ ಪೂರ್ವದಲ್ಲಿ ಪಡೆದುಕೊಂಡಿರುವುದಿಲ್ಲ.

**ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಮುಂದಿನ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ
(ಸ್ಥಳ ಸವಣೂರ)